REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 | ಸಂಚಿಕೆ : 12 | ಜೂನ್ 28, 2023 | ಬುಧವಾರ | ಪುಟಗಳು : 8 | ಬೆಲೆ : 2/-

## ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದಲ್ಲಿ ಸಚಿವರುಗಳಿಗೆ, ಶಾಸಕರಿಗೆ ಅಭಿನಂದನೆ ಸಮಾರಂಭ





**ಬೆಂಗಳೂರು** : ದಿನಾಂಕ : 22.06.2023ರಂದು ಮಹಾಮಂಡಳದ ಆಡಳಿತ ಮಂಡಳಿ ಸಭಾಂಗಣದಲ್ಲಿ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ಹಾಗೂ ಕಾನೂನು, ನ್ಯಾಯ, ಸಂಸದೀಯ ವ್ಯವಹಾರ, ಶಾಸನ ರಚನೆ, ಮಾನವ ಹಕ್ಕುಗಳು ಹಾಗೂ ಪ್ರವಾಸೋಧ್ಯಮ ಸಚಿವರಾದ ಶ್ರೀ ಎಚ್.ಕೆ. ಪಾಟೀಲ ಮತ್ತು ಸಿಂದಗಿ ಕ್ಷೇತ್ರದ ಶಾಸಕರಾದ ಶ್ರೀ ಅಶೋಕ ಎಂ. ಮನಗೂಳಿ ರವರುಗಳಿಗೆ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ನವರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು. ಈ ಸಮಾರಂಭದಲ್ಲಿ ಮಹಾಮಂಡಳದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು ಒಟ್ಟಿಗೆ ಸೇರಿ ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ರವರನ್ನು ಸನ್ಮಾನಿಸಿದರು.

ನಂತರ ಮಾನ್ಯ ಕಾನೂನು, ನ್ಯಾಯ, ಸಂಸದೀಯ ವ್ಯವಹಾರ, ಶಾಸನ ರಚನೆ, ಮಾನವ ಹಕ್ಕುಗಳು ಹಾಗೂ ಪ್ರವಾಸೋಧ್ಯಮ ಸಚಿವರು, ಮಹಾಮಂಡಳದ ಅಧ್ಯಕ್ಷರೂ ಆದ ಶ್ರೀ ಎಚ್.ಕೆ. ಪಾಟೀಲ ರವರನ್ನು ಸನ್ಮಾನಿಸಲಾಯಿತು. ಮಹಾಮಂಡಳದ ನಿರ್ದೇಶಕರು ಹಾಗೂ ಸಿಂದಗಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಅಶೋಕ ಎಂ. ಮನಗೂಳಿ ರವರನ್ನು ಸನ್ಮಾನಿಸಲಾಯಿತು.

ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು ಮಾತನಾಡಿ ಸಹಕಾರಿ ಕ್ಷೇತ್ರ ಇನ್ನು ಬೆಳೆಯಬೇಕಾಗಿದೆ. ಮಾನ್ಯ ಸಹಕಾರಿಗಳಾದ ತಾವು ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳ ಸಮಸ್ಯೆಗಳಿಗೆ ಸ್ಪಂದಿಸಿ ಸಹಕರಿಸಬೇಕೆಂದು



ಕೋರಿದರು. ಪಟ್ಟಣ ಸಹಕಾರ ಬ್ಯಾಂಕುಗಳು ಸಹಕಾರ ಸಂಘಗಳ ನಿಬಂಧಕರಿಂದ ನೋಂದಣಿಯಾಗಿ ಭಾರತೀಯ ರಿಜರ್ವ್ ಬ್ಯಾಂಕಿನ ಲೈಸೆನ್ಸ್ ಪಡೆದು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಶ್ಲಾಘಿಸಿದರು. ಮಹಾಮಂಡಳದ ಕೆಲವು ಬೇಡಿಕೆಗಳನ್ನು ಮಾನ್ಯ ಸಚಿವರ ಮುಂದೆ ಪ್ರಸ್ತಾಪಿಸಿ ಈ ಕೆಲಸಗಳನ್ನು ತಾವು ಆದಷ್ಟು ಬೇಗನೆ ಮಾಡಿಕೊಡಬೇಕೆಂದು ಕೋರಿದರು.

ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ನವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಹಕಾರ ಕ್ಷೇತ್ರದಲ್ಲಿ ಕೆಲವೊಂದು ಗೊಂದಲಗಳಿದ್ದು, ಅವುಗಳನ್ನು ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮವಿಡುತ್ತೇವೆಂದು ಭರವಸೆ ನೀಡಿದರು. ನಂತರ ಮಹಾಮಂಡಳದ ನಿರ್ದೇಶಕರಾದ ಶ್ರೀ ಹೆಚ್.ಸಿ. ಕೃಷ್ಣರವರು ವಂದನಾರ್ಪಣೆ ಸಲ್ಲಿಸಿದರು.

3ನೇ ಪುಟಕ್ಕೆ...

ಹಣದುಬ್ಬರ ತಗ್ಗಿಸಲು ಎಲ್‌ನಿನೊ ಸವಾಲು : ಶಕ್ತಿಕಾಂತ್ ದಾಸ್ 2
ದಿ ಟೆಕ್ಸ್‌ಟೈಲ್ ಮ್ಯಾನುಫ್ಯಾಕ್ಚರರ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದೊಡ್ಡಬಳ್ಳಾಪುರ : ಪ್ರತಿಭಾ ಪುರಸ್ಕಾರ ಸಮಾರಂಭ 4
ನಿಮ್ಮ ಪ್ರಶ್ನೆ ನಮ್ಮ ಉತ್ತರ 7

## ಸಂಪಾದಕೀಯ

### ಅತ್ಮೀಯ ಸಹಕಾರಿಗಳೇ...



## ಯೋಗದೊಂದಿಗೆ ಆರೋಗ್ಯಕರ ಜೀವನ ಪದ್ಧತಿಯನ್ನೂ ಅನುಸರಿಸಿ

ಇಂದಿನ ಆಧುನಿಕ ಜೀವನ ವಿಧಾನದಲ್ಲಿ ಮಾನಸಿಕ ಒತ್ತಡ ಎನ್ನುವುದು ಸರ್ವವ್ಯಾಪಿಯಾಗಿದೆ. ಆಧುನಿಕ ಜೀವನ ಶೈಲಿಯಲ್ಲಿ ಎಲ್ಲರೂ ಗೊತ್ತಿದ್ದೊ, ಗೊತ್ತಿಲ್ಲದೆಯೋ ಮಾನಸಿಕ ಒತ್ತಡಕ್ಕೆ ಗುರಿಯಾಗುತ್ತಿದ್ದಾರೆ. ಕಲಿಕೆಯಲ್ಲಿ ಶ್ರೇಷ್ಠತೆಯನ್ನು ಸಾಧಿಸುವ, ಕೆಲಸದಲ್ಲಿ ಗುರಿ ಮುಟ್ಟುವ, ವೃತ್ತಿಯಲ್ಲಿ ಉನ್ನತ ಸ್ಥಾನ ಪಡೆಯುವ, ಹೀಗೆ ಹಲವು ಬಗೆಯ ಒತ್ತಡಗಳು ಜನರನ್ನು ಮಾನಸಿಕವಾಗಿ, ದೈಹಿಕವಾಗಿ ಬಳಲುವಂತೆ ಮಾಡುತ್ತಿದೆ. ಹೀಗೆ ಪ್ರತಿಯೊಬ್ಬರೂ ತಮ್ಮದೇ ಆದ ಒತ್ತಡದಲ್ಲಿ ನರಳುತ್ತಿರುವುದು ಆಧುನಿಕ ಜಗತ್ತಿನ ವ್ಯಸನವಾಗಿಬಿಟ್ಟಿದೆ.

ಒಬ್ಬ ವ್ಯಕ್ತಿಯ ಈ ಸಮಸ್ಯೆ ಬೆಳೆದಂತೆ ಕುಟುಂಬದ, ಸಮಾಜದ ಸಮಸ್ಯೆಯಾಗಿ ಬಿಡುತ್ತದೆ. ಆದ್ದರಿಂದಲೇ ಇಂದು ಎಲ್ಲರೂ ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕಿದೆ. ಅದರಲ್ಲೂ ಹರೆಯದಲ್ಲಿರುವ ವ್ಯಕ್ತಿಗಳು ಮಾನಸಿಕ ಒತ್ತಡವನ್ನು ಹೇಗೆ ನಿರ್ವಹಿಸಬೇಕೆಂಬ ತರಬೇತಿಯನ್ನು ಪಡೆಯುವುದು ಅವಶ್ಯವಾಗಿದೆ. ಈ ವಯಸ್ಸಿನಲ್ಲಿ ಒತ್ತಡದ ನಿರ್ವಹಣೆಯನ್ನು ಕಲಿಯದಿದ್ದರೆ ಮುಂದಿನ ದಿನಗಳಲ್ಲಿ ಅದನ್ನು ನಿರ್ವಹಿಸುವುದು ಕಷ್ಟಕರವಾಗಲಿದೆ ಎನ್ನುವುದು ವೈದ್ಯಕೀಯ ಸಂಶೋಧನೆಯಲ್ಲಿ ಕಂಡುಬಂದಿದೆ.

ಕೆಲ ದಿನಗಳ ಹಿಂದೆ ಅಂತರರಾಷ್ಟ್ರೀಯ ಯೋಗ ದಿನವನ್ನು ಎಲ್ಲೆಡೆ ಸಂಭ್ರಮದಿಂದ ಆಚರಿಸಲಾಯಿತು. ಯೋಗವು ಉತ್ತಮ ಆರೋಗ್ಯಕರ ಜೀವನಕ್ಕೆ ಸಹಾಯವಾಗಿದೆ. ಯೋಗದಿಂದ ಮನಸ್ಸು, ಮಾನಸಿಕ ಉತ್ತಮ ಬೆಳವಣಿಗೆಗೆ ಅನುಕೂಲವಾಗಿದೆ. ಯೋಗ ಮಾಡುವುದರಿಂದ ಉಸಿರಾಟದ ಮೇಲೆ ನಿಯಂತ್ರಣ ಸಾಧಿಸಬಹುದಾಗಿದೆ. ಆದರೆ, ಎಲ್ಲರಿಗೂ ನಿತ್ಯ ಯೋಗ ನಿರತರಾಗುವುದು ಸಾಧ್ಯವಾಗದಿರಬಹುದು. ಅವರುಗಳು ಆರೋಗ್ಯಕರ ಬದುಕಿಗಾಗಿ ಕೆಲವು ಸರಳ ಹವ್ಯಾಸಗಳನ್ನು ಅನುಸರಿಸಬಹುದಾಗಿದೆ.

ಅವುಗಳಲ್ಲೊಂದು; ಮನೆ, ಕಾರ್ಯನಿರ್ವಹಿಸುವ ಕಚೇರಿಗಳಲ್ಲಿ ಕುಂಡಗಳಲ್ಲಿ ಹೂವಿನ ಗಿಡಗಳನ್ನ ಬೆಳೆಸುವ ಹಾಗೇ, ಸಂಗೀತ, ಸಾಹಿತ್ಯದ ಬಗ್ಗೆ ಆಸಕ್ತಿ ಬೆಳಸಿಕೊಳ್ಳಬಹುದು. ನಮ್ಮ ಸುತ್ತಲಿನ ಸಮಾಜದ ಬಗ್ಗೆ ಋಣಾತ್ಮಕ ಆಯೋಚನೆ ಹೊಂದುವುದು. ಹಾಗೆಯೇ, ಸುಮ್ಮನೆ ಕುಳಿತು ಕೆಲ ನಿಮಿಷಗಳು ಧ್ಯಾನ ಮಾಡುವುದರಿಂದಲೂ ದೇಹದ ರಕ್ತ ಪರಿಚಲನೆ ಸರಾಗವಾಗಿ ಮಾನಸಿಕ, ದೈಹಿಕ ನೋವು ನಿವಾರಣೆಯಾಗಿ, ಮನಸ್ಸು ಉಲ್ಲಾಸಿತಗೊಂಡು; ಆತಂಕ, ಒತ್ತಡ ಮರೆಯಾಗಿ, ಶಾಂತಿಯಿಂದ ಇರಲು ಸಾಧ್ಯವಾಗುತ್ತದೆ ಇದು ನನ್ನ ಅನುಭವದ ಮಾತು.

ಇದು ಹೊರ ನೋಟಕ್ಕಾಯಿತು, ಒತ್ತಡದಿಂದ ಹೊರಬರಲು ವ್ಯಾಯಾಮ ಅತ್ಯುತ್ತಮ ಮಾರ್ಗವಾಗಿದೆ. ನಿತ್ಯ ಕೆಲ ಹೊತ್ತು ವ್ಯಾಯಾಮದಲ್ಲಿ ತೊಡಗಿಸಿಕೊಂಡರೆ ರಕ್ತ ಪರಿಚಲನೆ ಸರಾಗವಾಗಿ, ದೇಹಕ್ಕೆ ನೆಮ್ಮದಿಯನ್ನು ನೀಡುವ ಜತೆಗೆ ಮನಸ್ಸನ್ನು ಉಲ್ಲಸಿತಗೊಳಿಸುತ್ತದೆ. ಮುಂಜಾನೆಯ ವಾಯುವಿಹಾರ, ಸೈಕ್ಲಿಂಗ್ ಮಾಡುವುದು ಕೂಡಾ ಮನಸ್ಸನ್ನು ತಿಳಿಯಾಗಿಸಬಲ್ಲದು. ಇದೆಲ್ಲ ದೈಹಿಕ, ಮಾನಸಿಕ ವಿಚಾರವಾದರೇ, ನಾವು ಸೇವಿಸುವ ಆಹಾರದಲ್ಲಿ ತಾಜಾ ತರಕಾರಿ, ಸೊಪ್ಪು ಮತ್ತು ಹಣ್ಣುಗಳನ್ನು ಸೇವಿಸುವ ಅಭ್ಯಾಸ ರೂಢಿಸಿಕೊಂಡಲ್ಲಿ ನಮ್ಮ ಶರೀರ ತನಗೇ ತಾನೇ ಆರೋಗ್ಯದಿಂದ ಉಲ್ಲಾಸಗೊಳ್ಳುತ್ತದೆ. ಆಗ ಖಿನ್ನತೆ ತಾನೇ ತಾನಾಗಿ ದೂರವಾಗುತ್ತದೆ. ಇವುಗಳಲ್ಲಿ ಕೆಲವನ್ನಾದರೂ ನಾವು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಮಾನಸಿಕ, ದೈಹಿಕ ಒತ್ತಡದಿಂದ ಪಾರಾಗಬಹುದಾಗಿದೆ. ಹೀಗೆ ತಮಗೆ ಸೂಕ್ತವೆನಿಸುವ ಆರೋಗ್ಯಕರ ಜೀವನ ಪದ್ಧತಿ ಅನುಸರಿಸಿದಲ್ಲಿ ನೆಮ್ಮದಿ ತಾನಾಗಿಯೇ ದೊರೆಯುತ್ತದೆ.

▸▸ ಎಚ್.ಕೆ. ಪಾಟೀಲ್

## ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿ., ಶಿವಮೊಗ್ಗ : ಅಧ್ಯಕ್ಷರ ಆಯ್ಕೆ

**ಶಿವಮೊಗ್ಗ :** ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿ., ಇದರ ತೆರವಾದ ಅಧ್ಯಕ್ಷ ಸ್ಥಾನಕ್ಕೆ ದಿನಾಂಕ : 14.06.2023ರ ಬುಧವಾರದಂದು ರಿಟರ್ನಿಂಗ್ ಅಧಿಕಾರಿಗಳಾದ ಶ್ರೀಯುತ ಎನ್.ಜಿ. ರುದ್ರಪ್ಪ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿವಮೊಗ್ಗ ಉಪವಿಭಾಗ ಶಿವಮೊಗ್ಗ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬ್ಯಾಂಕಿನ ನಿರ್ದೇಶಕರಾದ ಶ್ರೀಯುತ ಎಂ.ಕೆ. ಸುರೇಶ್‌ಕುಮಾರ್ ಇವರನ್ನು ಮುಂದಿನ ಉಳಿದ ಅವಧಿಗೆ ಬ್ಯಾಂಕಿನ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

## ಹಣದುಬ್ಬರ ತಗ್ಗಿಸಲು ಎಲ್‌ನಿನೊ ಸವಾಲು : ಶಕ್ತಿಕಾಂತ್ ದಾಸ್

**ಮುಂಬೈ :** ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧರಿಸಿದ ಚಿಲ್ಲರೆ ಹಣದುಬ್ಬರ ದರವನ್ನು ಶೇಕಡ 4ಕ್ಕೆ ತಗ್ಗಿಸುವ ಪ್ರಯತ್ನ ನಡೆಸಲಾಗುವುದು. ಆದರೆ, ಇದಕ್ಕೆ ಎಲ್–ನಿನೊ ಸವಾಲಾಗಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಆರ್‌ಬಿಐ ಅಂದಾಜು ಮಾಡಿರುವಂತೆಯೇ ದೇಶದ ಆರ್ಥಿಕತೆಯು ಶೇ 6.5ರಷ್ಟು ಬೆಳವಣಿಗೆ ಕಾಣುವ ವಿಶ್ವಾಸವಿದೆ ಎಂದು ಅವರು ತಿಳಿಸಿದ್ದಾರೆ. ಮುಂಗಾರು ವಾಡಿಕೆಯಂತೆ ಇರುವ ನಿರೀಕ್ಷೆ ಇದ್ದರೂ ಎಲ್ ನಿನೊದ ಆತಂಕ ಇದೆ. ಇದರ ಪರಿಣಾಮ ಎಷ್ಟು ತೀವ್ರವಾಗಿ ಇರಲಿದೆ ಎನ್ನುವುದನ್ನು ನೋಡಬೇಕಿದೆ. ಹವಾಮಾನವು ಯಾವ ರೀತಿಯಲ್ಲಿ ಇರಲಿದೆ ಎನ್ನುವುದನ್ನೂ ಗಮನಿಸಬೇಕಿದೆ. ಅದು ಸಹ ಆಹಾರ ಹಣದುಬ್ಬರದ ಮೇಲೆ ಪರಿಣಾಮ ಬೀರಲಿದೆ ಎಂದು ದಾಸ್ ಹೇಳಿದ್ದಾರೆ.

ಕಳೆದ ವರ್ಷದ ಮೇ ತಿಂಗಳಿನಿಂದ ಈವರೆಗೆ ಒಟ್ಟು ರೆಪೊ ದರವನ್ನು 250 ಮೂಲಾಂಶದಷ್ಟು ಹೆಚ್ಚಿಸಲಾಗಿದೆ. ಇದರ ಜೊತೆಗೆ ಕೇಂದ್ರ ಸರ್ಕಾರವು ಪೂರೈಕೆ ವ್ಯವಸ್ಥೆಯನ್ನು ಸುಧಾರಿಸಲು ಹಲವು ಕ್ರಮಗಳನ್ನು ತೆಗೆದುಕೊಂಡಿತು. ಈ ಕಾರಣಗಳಿಂದಾಗಿ ಚಿಲ್ಲರೆ ಹಣದುಬ್ಬರವು ಮೇ ತಿಂಗಳಿನಲ್ಲಿ ಶೇ 4.25ಕ್ಕೆ ಇಳಿಕೆ ಕಂಡಿದೆ ಎಂದು ಅವರು ವಿವರಿಸಿದ್ದಾರೆ.

ಹಣದುಬ್ಬರದ ಪರಿಸ್ಥಿತಿಯನ್ನು ನಾವು ನಿರಂತರವಾಗಿ ಪರಿಶೀಲಿಸುತ್ತಿದ್ದೇವೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರವು ಶೇ 5.1ರಲ್ಲಿ ಇರುವ ನಿರೀಕ್ಷೆ ಇದೆ. ಅದನ್ನು ಶೇ 4ಕ್ಕೆ ಇಳಿಸುವ ಪ್ರಯತ್ನವನ್ನು ಮುಂದುವರಿಸಲಾಗುವುದು ಎಂದು ಹೇಳಿದ್ದಾರೆ. ಸಾಲದ ಬಡ್ಡಿದರ ಗರಿಷ್ಠ ಮಟ್ಟದಲ್ಲಿ ಇರುವ ಕುರಿತು ಮಾತನಾಡಿದ ಅವರು, 'ಬಡ್ಡಿದರಗಳು ಹಣದುಬ್ಬರದೊಂದಿಗೆ ನೇರವಾದ ಸಂಬಂಧ ಹೊಂದಿವೆ. ಹಣದುಬ್ಬರವು ಶೇ 4ಕ್ಕೆ ಇಳಿಕೆ ಕಂಡಲ್ಲಿ ಆರ್‌ಬಿಐ ಬಡ್ಡಿದರ ಕಡಿತ ಮಾಡಬಹುದು' ಎಂದಿದ್ದಾರೆ.

...1ನೇ ಪುಟದಿಂದ

## ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದಲ್ಲಿ ಸಚಿವರುಗಳಿಗೆ, ಶಾಸಕರಿಗೆ ಅಭಿನಂದನೆ ಸಮಾರಂಭ



ಈ ಸಭೆಯಲ್ಲಿ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಡಿ.ಟಿ. ಪಾಟೀಲ, ಶ್ರೀ ರುದ್ರೇಗೌಡ, ಶ್ರೀ ಕೃಷ್ಣ ಹೆಚ್.ಸಿ., ಶ್ರೀ ಕೋಗುಂಡಿ ಬಕ್ಕೇಶಪ್ಪ, ಶ್ರೀ ಬಸವರಾಜ ಈಶ್ವರಪ್ಪಾ ಕಲ್ಯಾಣಶೆಟ್ಟಿ, ಶ್ರೀ ಹರೀಶ್ ಆಚಾರ್, ಶ್ರೀ ಕೃಷ್ಣಮೂರ್ತಿ ಭಂಡಾರಿ, ಶ್ರೀ ರಾಘವ ವಿಷ್ಣು ಬಾಳೇರಿ, ಶ್ರೀ ಮಲಕಣ್ಣ ಡಿ. ಪಾಟೀಲ, ಶ್ರೀ ರಾಜಕುಮಾರ ಬಸವರಾಜ ಬಾದವಾಡಗಿ, ಶ್ರೀ ನಿರಂಜನ ಟಿ.ಎಸ್, ಶ್ರೀ ವಾಸು ಹೆಚ್., ಡಾ॥ ಎಂ.ಬಿ. ಮಂಜೇಗೌಡ, ಶ್ರೀಮತಿ ವೀರಮ್ಮ ಪಿ., ಶ್ರೀ ಎಂ.ಕೆ. ಪಟ್ಟಣಶೆಟ್ಟಿ, ಶ್ರೀ ರಘುನಾಥ ಸಿ., ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರುಗಳಾದ ಶ್ರೀ ಪಿ.ಎಲ್. ವೆಂಕಟರಾಮರೆಡ್ಡಿ, ಶ್ರೀ ಎಮ್.ಎಮ್.ಮೆಟಗುಡ್ಡ, ಶ್ರೀ ಆರ್.ಎಸ್. ಸುಬ್ರಹ್ಮಣ್ಯ, ಶ್ರೀ ಬಿ.ಎನ್. ಲೋಕೇಶ್, ಶ್ರೀ ಚಂದ್ರಮೌಳಿ, ಎಸ್., ಶ್ರೀ ವಿಕ್ರಮ ಆರ್. ಸಿರೂರ, ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ, ಶ್ರೀ ರವಿಚಂದ್ರನ್, ಶ್ರೀ ಹೆಚ್.ಎಸ್. ನಾಗರಾಜಯ್ಯ, ಶ್ರೀ ಕೆ.ಎಸ್. ಮಹದೇವಸ್ವಾಮಿ, ಶ್ರೀ ಹರೀಶ್ ಕಶ್ಯಪ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಉಪಸ್ಥಿತರಿದ್ದರು.

## ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ನಿರ್ದೇಶಕರುಗಳು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮತ್ತು ಅಧಿಕಾರಿಗಳ ಜೊತೆಗೆ ವಿಡಿಯೋಕಾನ್ಫರೆನ್ಸ್




**ಬೆಂಗಳೂರು :** ಮಹಾಮಂಡಳವು ದಿನಾಂಕ : 20.06.2023 ರಂದು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ನಿರ್ದೇಶಕರುಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಅಧಿಕಾರಿಗಳಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ Important Recent RBI Circulars ಕುರಿತು ಏರ್ಪಡಿಸಿದ್ದ ವೆಬಿನಾರ್‌ನಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ವೆಬಿನಾರ್‌ನಲ್ಲಿ ಭಾಗವಹಿಸಿದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳಿಗೆ ಸ್ವಾಗತವನ್ನು ಕೋರಿ, ಮಾತನಾಡಿ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ಈಗಾಗಲೇ ತಮಗೆಲ್ಲ ತಿಳಿದಿರುವಂತೆ ಹಲವಾರು ವಿಷಯಗಳ ಬಗ್ಗೆ ಭೌತಿಕವಾಗಿ ಮತ್ತು ವೆಬಿನಾರ್ ಮೂಲಕ ಅನೇಕ ಮಾಹಿತಿಗಳನ್ನು ಒದಗಿಸುತ್ತಿರುವುದಲ್ಲದೆ ಪತ್ರಿಕೆಗಳ ಮೂಲಕ ಮಾಹಿತಿ ನೀಡಲಾಗುತ್ತಿದೆ. ಈ ದಿನ ಏರ್ಪಡಿಸಿರುವ ವೆಬಿನಾರ್‌ನಲ್ಲಿ ತಾವೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದರು. ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್‌ರವರು Important Recent RBI Circular ಕುರಿತು ವಿವರವಾಗಿ ಉಪನ್ಯಾಸ ನೀಡಿದರು. ಕೊನೆಯಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ವಂದನಾರ್ಪಣೆ ಸಲ್ಲಿಸಿದರು. ಈ ವೆಬಿನಾರ್‌ನಲ್ಲಿ 250ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ ಆರ್‌ಬಿಐ ಪ್ರಮುಖ ಸುತ್ತೋಲೆಗಳ ಕುರಿತು ತಿಳಿದುಕೊಂಡರು.

## ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕರನ್ನು ಹೊರತುಪಡಿಸಿ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ (Management Development Programme)ಯನ್ನು ಏರ್ಪಡಿಸಿರುವ ಕುರಿತು

ಬೆಂಗಳೂರು : ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ) ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಐದು ದಿನಗಳ ಉನ್ನತ ಮಟ್ಟದ "ನಿರ್ವಹಣೆ ಅಭಿವೃದ್ಧಿ ತರಬೇತಿ" (Management Development Programme) ಯನ್ನು ಪ್ರಾರಂಭಿಸಲಾಗಿದೆ. ಇತ್ತೀಚೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ಅವುಗಳನ್ನು ಸಮರ್ಥವಾಗಿ ನಿರ್ವಹಿಸಲು ಈ ದೀರ್ಘಾವಧಿಯ ತರಬೇತಿಯನ್ನು ಏರ್ಪಡಿಸಲಾಗಿದೆ.

ಈ ಸದರಿ ತರಬೇತಿಯನ್ನು ದಿನಾಂಕ : 03.07.2023 ರಿಂದ ದಿನಾಂಕ : 07.07.2023ರವರೆಗೆ ಬೆಳಿಗ್ಗೆ 09.00 ಗಂಟೆಯಿಂದ ಸಾಯಂಕಾಲ 05.30 ಗಂಟೆಯವರೆಗೆ ಒಟ್ಟು ಐದು ದಿನಗಳ ಕಾಲ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್ಐಸಿಎಂ) ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು–560070 ಇಲ್ಲಿ ಏರ್ಪಡಿಸಲಾಗಿದೆ.

ಈ ಮೂರು ದಿನಗಳ ತರಬೇತಿ ಶಿಬಿರದಲ್ಲಿ ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ನೋಂದಾಯಿಸಿದ ಪ್ರತಿನಿಧಿಗಳಿಗೆ ಮಾತ್ರ ಅವಕಾಶವಿರುತ್ತದೆ.

ಈ ತರಬೇತಿ ಶಿಬಿರದ ಶುಲ್ಕದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ದಿನಾಂಕ : 16.06.2023 ರಂದು ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಬರೆದಿರುವ ಪತ್ರವನ್ನು ತಾವು ತಮ್ಮ ಬ್ಯಾಂಕಿನ ಇ–ಮೇಲ್‌ನಲ್ಲಿ ನೋಡಬಹುದು. ಪ್ರತಿನಿಧಿ ಶುಲ್ಕವನ್ನು ಚೆಕ್/ಡಿ.ಡಿ ಅಥವಾ ಎನ್ಇಎಫ್‌ಟಿ ಮುಖಾಂತರ ದಿನಾಂಕ : 30.06.2023 ರೊಳಗಾಗಿ ಪಾವತಿಸಿ ಮಹಾಮಂಡಳದಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಅಧಿಕಾರಿಗಳಾದ ಶ್ರೀ ಎನ್. ರಮೇಶ್ (9448003167) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9110642779) ರವರುಗಳನ್ನು ಸಂಪರ್ಕಿಸಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಯವರು ತಿಳಿಸಿರುತ್ತಾರೆ.

## ದಿ ಟೆಕ್ಸ್‌ಟೈಲ್ ಮ್ಯಾನುಫ್ಯಾಕ್ಚರರ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ದೊಡ್ಡಬಳ್ಳಾಪುರ : ಪ್ರತಿಭಾ ಪುರಸ್ಕಾರ ಸಮಾರಂಭ

ದಿ ಟೆಕ್ಸ್‌ಟೈಲ್ ಮ್ಯಾನುಫ್ಯಾಕ್ಚರರ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ವತಿಯಿಂದ 2022–23ನೇ ಸಾಲಿನಲ್ಲಿ ಎಸ್ಎಸ್ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ 85% ಮೇಲ್ಪಟ್ಟು ಅಂಕ ಪಡೆದಿರುವ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ದಿನಾಂಕ : 18.6.2023 ನೇ ಭಾನುವಾರ ಬ್ಯಾಂಕಿನ ಕೆ.ಸಿ.ಪುಟ್ಟಯ್ಯ ಸಭಾಭವನದಲ್ಲಿ ಏರ್ಪಡಿಸಲಾಗಿತ್ತು.



ಸಭೆಯ ಅಧ್ಯಕ್ಷತೆ ವಹಿಸಿದ್ದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಪಿ.ವಾಸುದೇವ್ ರವರು ಮಾತನಾಡಿ ಸ್ಪರ್ಧಾತ್ಮಕ ಅಗತ್ಯವಾಗಿದ್ದು, ವಿದ್ಯಾರ್ಥಿಗಳು ಎಲ್ಲಾ ಹಂತಗಳಲ್ಲಿ ಎಚ್ಚರಿಕೆಯಿಂದ ಇರಬೇಕು. ಸಾಧನೆಯನ್ನು ಗುರ್ತಿಸುವ ಮೂಲಕ ಸಮಾಜ ಪ್ರತಿಭಾ ಪ್ರಚೋದನೆಗೆ ವೇದಿಕೆಯಾಗಬೇಕು. ವಿದ್ಯಾರ್ಥಿಗಳು ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವೈವಿಧ್ಯಮಯ ಆಯ್ಕೆಗಳ ಸಾಧ್ಯಾ ಸಾಧ್ಯತೆ ಅರಿತುಕೊಳ್ಳಬೇಕು. ಆ ಮೂಲಕ ಸಾಮಾಜಿಕ ಕ್ಷೇತ್ರದಲ್ಲೂ ಗುರ್ತಿಸಿಕೊಳ್ಳುವಂತಾಗಬೇಕು ಎಂದು ಹೇಳಿದರು. ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಕಳೆದ 10 ವರ್ಷಗಳಿಂದ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ ಎಂದು ಹೇಳಿದರು. ಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಜಿ. ಮಂಜುನಾಥ್ ಮತ್ತು ನಿರ್ದೇಶಕರಾದ ಶ್ರೀ ಪಿ.ಸಿ. ವೆಂಕಟೇಶ್, ಶ್ರೀ ಎ.ಆರ್. ಶಿವಕುಮಾರ್, ಶ್ರೀ ಎ.ಎಸ್.ಕೇಶವ, ಶ್ರೀ ಕೆ.ಜಿ. ಗೋಪಾಲ್, ಶ್ರೀ ಡಿ. ಪ್ರಶಾಂತ್‌ಕುಮಾರ್, ಶ್ರೀಮತಿ ಡಾ|| ಆರ್. ಇಂದಿರಾ, ಶ್ರೀಮತಿ ಎ. ಗಿರಿಜಾ, ವೃತ್ತಿಪರ ನಿರ್ದೇಶಕರಾದ ಶ್ರೀ ಎ.ಆರ್. ನಾಗರಾಜನ್, ಶ್ರೀ ಕೆ.ಎಂ. ಕೃಷ್ಣಮೂರ್ತಿ ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.





# ಸ್ವಾಮಿನಾಥನ್ ಜಾನಕಿರಮಣ್ ಆರ್‌ಬಿಐ ಡೆಪ್ಯುಟಿ ಗವರ್ನರ್




**ನವದೆಹಲಿ :** ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ವ್ಯವಸ್ಥಾಪಕ ನಿರ್ದೇಶಕ ಸ್ವಾಮಿನಾಥನ್ ಜಾನಕಿರಮಣ್ ಅವರನ್ನು ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಡೆಪ್ಯುಟಿ ಗವರ್ನರ್ ಆಗಿ ನೇಮಕ ಮಾಡಿದೆ. ಅಧಿಕಾರ ಸ್ವೀಕರಿಸಿದ ದಿನದಿಂದ ಮೂರು ವರ್ಷಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಅವರು ಈ ಹುದ್ದೆಯಲ್ಲಿ ಇರುತ್ತಾರೆ.

ಆರ್‌ಬಿಐ ಕಾಯ್ದೆ 1934ರ ಅನ್ವಯ ಕೇಂದ್ರೀಯ ಬ್ಯಾಂಕ್‌ನಲ್ಲಿ ನಾಲ್ಕು ಮಂದಿ ಡೆಪ್ಯುಟಿ ಗವರ್ನರ್‌ಗಳು ಇರುತ್ತಾರೆ. ಡೆಪ್ಯುಟಿ ಗವರ್ನರ್‌ಗೆ ತಿಂಗಳಿಗೆ ರೂ.2.25 ಲಕ್ಷ ವೇತನ ಹಾಗೂ ಇತರ ಭತ್ಯೆಗಳನ್ನು ನೀಡಲಾಗುತ್ತದೆ.



## ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕ್ : ಹೊಸ ಶಾಖೆಗಳ ಉದ್ಘಾಟನೆ

ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕಿನ 17ನೇ ಶಾಖೆಯನ್ನು "ಮೂಡಲಗಿ"ಯಲ್ಲಿ ದಿನಾಂಕ : 08.06.23 ರಂದು ದತ್ತಾತ್ರೇಯಬೋಧ ಶ್ರೀ ಶ್ರೀಪಾದಬೋಧ ಸ್ವಾಮಿಗಳು, ಸಿದ್ಧಸಂಸ್ಥಾನಮಠ, ಮೂಡಲಗಿ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು, ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.




ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕಿನ 18ನೇ ಶಾಖೆಯನ್ನು "ಚಿಕ್ಕೋಡಿ"ಯಲ್ಲಿ ದಿನಾಂಕ : 08.06.2023 ರಂದು ಶ್ರೀ ಮ.ನಿ.ಪ್ರ. ಶ್ರೀ ಸಂಪಾದನ ಮಹಾಸ್ವಾಮಿಗಳು, ಶ್ರೀ ಸಂಪಾದನ ಚರಮೂರ್ತಿಮಠ, ಚಿಕ್ಕೋಡಿ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು, ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.



ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕಿನ 19ನೇ ಶಾಖೆಯನ್ನು "ನಿಪ್ಪಾಣಿ"ಯಲ್ಲಿ ದಿನಾಂಕ : 08.06.2023 ರಂದು ಶ್ರೀ ಮ.ನಿ.ಪ್ರ. ಶಿವಾನಂದ ಮಹಾಸ್ವಾಮಿಗಳು ಗಿರಿಮಠ, ಆಡಿ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು.

ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು, ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.

# ಐಟಿ ರಿಟರ್ನ್ಸ್ ಸಲ್ಲಿಕೆ : ತೆರಿಗೆದಾರರು ಗಮನದಲ್ಲಿಡಬೇಕಾದ ಪ್ರಮುಖ ಅಂಶಗಳಿವು...

ತೆರಿಗೆ ಲೆಕ್ಕಪರಿಶೋಧನೆಗೆ ಒಳಪಡದ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆಗೆ ಜು.31 ಕೊನೆಯ ದಿನವಾಗಿದೆ. ಆದ್ದರಿಂದ ಐಟಿಆರ್ ಸಲ್ಲಿಕೆ ಮಾಡದೇ ಇರುವವರು ದಂಡ ಪಾವತಿಸುವುದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಐಟಿ ರಿಟರ್ನ್ಸ್ ಸಲ್ಲಿಕೆಯ ಪ್ರಕ್ರಿಯೆಯನ್ನು ಚುರುಕುಗೊಳಿಸಬೇಕಾಗುತ್ತದೆ.

ನೀವು ಐಟಿ ರಿಟರ್ನ್ಸ್ ಸಲ್ಲಿಕೆಗೆ ತೆರಿಗೆ ತಜ್ಞರನ್ನು ನೇಮಕ ಮಾಡಿದ್ದೀರೋ ಇಲ್ಲವೋ ಆದರೆ ರಿಟರ್ನ್ಸ್ ಪ್ರಕ್ರಿಯೆಯ ಮೂಲಭೂತ ಅಂಶಗಳನ್ನು ತಿಳಿದಿರುವುದು ಒಳಿತು. ಮೊದಲನೆಯದ್ದಾಗಿ ವ್ಯಕ್ತಿಯೋರ್ವನಿಗೆ 4 ಐಟಿಆರ್ ಫಾರ್ಮ್‌ಗಳು ಅನ್ವಯಿಸುತ್ತದೆ. ಉದಾಹರಣೆಗೆ ವ್ಯಕ್ತಿಯೋರ್ವ ವೇತನ ಪಡೆಯುತ್ತಿದ್ದರೆ ಅಥವಾ ಪಿಂಚಣಿದಾರಾಗಿದ್ದುಕೊಂಡು ಒಂದು ಮನೆಯ ಆಸ್ತಿಯಿಂದ ಆದಾಯ ಹಾಗೂ ವಾರ್ಷಿಕ 50 ಲಕ್ಷ ರೂಪಾಯಿ ಬಡ್ಡಿಯ ಆದಾಯದ ರೀತಿಯ ಮೂಲಗಳನ್ನು ಹೊಂದಿದ್ದರೆ, ಇಂತಹ ವ್ಯಕ್ತಿಗಳಿಗೆ ಫಾರ್ಮ್ 1 ಅನ್ವಯವಾಗಲಿದೆ.

ಒಂದು ವೇಳೆ ವೇತನ, ಪಿಂಚಣಿ ಹಾಗೂ ಇತರ ಮೂಲಗಳಿಂದ ವ್ಯಕ್ತಿಯೋರ್ವನ ಆದಾಯ 50 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದ್ದಲ್ಲಿ ಐಟಿಆರ್ ಫಾರ್ಮ್ 2 ಅನ್ವಯವಾಗಲಿದೆ. ಮತ್ತೊಂದೆಡೆ, ಒಬ್ಬ ವ್ಯಕ್ತಿ ತನ್ನ ಆದಾಯದ ಮೂಲವಾಗಿ ವ್ಯಾಪಾರ ಲಾಭದೊಂದಿಗೆ ಸ್ವಯಂ-ಉದ್ಯೋಗಿಯಾಗಿದ್ದರೆ, ಅವನು/ಅವಳು ITR ಫಾರ್ಮ್ 3 ಅನ್ನು ಬಳಸಿಕೊಂಡು ರಿಟರ್ನ್ಸ್ ಸಲ್ಲಿಸಬಹುದಾಗಿದೆ. ಸಂಬಳ ಪಡೆಯುವ ವ್ಯಕ್ತಿ ಜೊತೆಗೆ ವ್ಯಾಪಾರ ಆದಾಯವನ್ನು ಹೊಂದಿದ್ದರೆ **ITR** 3 ಫಾರ್ಮ್‌ಗೆ ಹೋಗಬಹುದಾಗಿದೆ. ಪೂರ್ವಭಾವಿ ತೆರಿಗೆಯನ್ನು ಆಯ್ಕೆ ಮಾಡಿಕೊಳ್ಳುವವರು ಐಟಿಆರ್ 4 ಫಾರ್ಮ್‌ನ್ನು ಬಳಕೆ ಮಾಡಬಹುದಾಗಿದೆ.

### ಫಾರ್ಮ್ 16/A ಹಾಗೂ 26AS

ಮೊದಲ ಹಂತವೇನೆಂದರೆ ಅದು ಟಿಡಿಎಸ್ ಪ್ರಮಾಣಪತ್ರ (ಫಾರ್ಮ್ 16/ ಫಾರ್ಮ್ 16A), ಬಡ್ಡಿ ಪ್ರಮಾಣಪತ್ರ (ಪಾವತಿಸಿರುವುದು ಹಾಗೂ ಸ್ವೀಕರಿಸಿರುವುದು), ಗೃಹ ಸಾಲದ ಸ್ಟೇಟ್ ಮೆಂಟ್, ಬ್ಯಾಂಕ್ ಸ್ಟೇಟ್ಮೆಂಟ್, ಫಾರ್ಮ್ 26AS, ಬಂಡವಾಳ ಲಾಭದ ಹೇಳಿಕೆ ಮತ್ತು ಆಧಾರ್ ಕಾರ್ಡ್ ನಂತಹ ದಾಖಲೆಗಳನ್ನು ಸಿದ್ಧವಾಗಿರಿಸಿಕೊಂಡಿರುವುದಾಗಿದೆ ಈ ದಾಖಲೆಗಳ ಸಹಾಯದಿಂದ ನೀವು ನಿಮ್ಮ ಒಟ್ಟು ವೇತನ ಹಾಗೂ ಟಿಡಿಎಸ್ ಎಷ್ಟು ಪಾವತಿಸಲಾಗಿದೆ ಎಂಬುದನ್ನು ತಿಳಿಯಬಹುದಾಗಿದೆ.

ಫಾರ್ಮ್ 16 ಟಿಡಿಎಸ್ ಪ್ರಮಾಣ ಪತ್ರವಾಗಿದ್ದು, ಇದನ್ನು ಉದ್ಯೋಗದ ಸ್ಥಳದಲ್ಲಿ ನೀಡಲಾಗುತ್ತದೆ ಹಾಗೂ ಇದು ನಂತರದ ಹಂತದಲ್ಲಿ ಇದು ತೆರಿಗೆ ಪಾವತಿಗೆ ಪುರಾವೆಯಾಗಿ ಕಾರ್ಯನಿರ್ವಹಿಸಲಿದೆ. ಫಾರ್ಮ್ 16ನಲ್ಲಿ ಪರ್ಕ್ವಿಸೈಟ್‌ಗಳು, ಮನೆ ಬಾಡಿಗೆ ಭತ್ಯೆ, ವೃತ್ತಿಪರ ತೆರಿಗೆ ಇತ್ಯಾದಿ ಸೇರಿದಂತೆ ಒಟ್ಟು ಸಂಬಳದ ವಿವರಗಳನ್ನು ಒಳಗೊಂಡಿರುತ್ತದೆ. ತೆರಿಗೆ ತಜ್ಞರ ಪ್ರಕಾರ, ತೆರಿಗೆದಾರರು ತಮ್ಮ ಸಂಬಳದ ಎಲ್ಲಾ ಅಂಶಗಳಾದ ಮೂಲ ವೇತನ, ಭತ್ಯೆಗಳು, ಪರ್ಕ್ವಿಸೈಟ್‌ಗಳು, ಬೋನಸ್‌ಗಳು ಇತ್ಯಾದಿಗಳನ್ನು ಗಮನಿಸಬೇಕು.

ಫಾರ್ಮ್ 16A 'ಸಂಬಳವನ್ನು ಹೊರತುಪಡಿಸಿ ಆದಾಯ'ದ ಮೇಲಿನ ಟಿಡಿಎಸ್‌ಗೂ ಅನ್ವಯವಾಗಲಿದ್ದು, ಬ್ಯಾಂಕ್ ಸ್ಥಿರ ಠೇವಣಿಗಳಿಂದ ಬಡ್ಡಿ ಆದಾಯದ ಮೇಲೆ TDS ಕಡಿತಗೊಳಿಸಿದಾಗ, ವಿಮಾ ಕಮಿಷನ್‌ನಲ್ಲಿ ಟಿಡಿಎಸ್ ಕಡಿತಗೊಳಿಸಲಾದಾಗ, ಬಾಡಿಗೆ ರಸೀದಿಗಳಲ್ಲಿ ಟಿಡಿಎಸ್ ಕಡಿತಗೊಳಿಸಲಾದಾಗ




ಫಾರ್ಮ್ 16A ನ್ನು ನೀಡಲಾಗುತ್ತದೆ.

"ಮನೆ ಬಾಡಿಗೆ ಭತ್ಯೆ (HRA), ಸ್ಟ್ಯಾಂಡರ್ಡ್ ಡಿಡಕ್ಷನ್, ವೃತ್ತಿಪರ ತೆರಿಗೆ, ಇತ್ಯಾದಿಗಳಂತಹ ಅನ್ವಯವಾಗುವ ಕಡಿತಗಳನ್ನು ಕಳೆದ ನಂತರ, ಒಬ್ಬ ವ್ಯಕ್ತಿಗೆ ತೆರಿಗೆಗೆ ಒಳಪಡುವ ಆದಾಯದ ಲೆಕ್ಕ ಸಿಗುತ್ತದೆ ಎನ್ನುತ್ತಾರೆ ಚಾರ್ಟರ್ಡ್ ಅಕೌಂಟೆಂಟ್ ಅತುಲ್ ಗೋಯೆಲ್. ಬಡ್ಡಿ ಆದಾಯ, ಲಾಭಾಂಶಗಳು ಅಥವಾ ಇತರ ಮೂಲಗಳಿಂದ ಬರುವ ಆದಾಯವನ್ನು ಸೇರಿಸುವ ಅಗತ್ಯವಿದೆ ಎಂದು ಅವರು ಹೇಳಿದರು.

ಇನ್ನು 26AS ಆದಾಯ ತೆರಿಗೆ ಇಲಾಖೆ ವೆಬ್‌ಸೈಟ್ ನಿಂದ ಪಡೆಯ ಬಹುದಾಗಿದೆ. ಇದು ವ್ಯಕ್ತಿಯ PAN (ಶಾಶ್ವತ ಖಾತೆ ಸಂಖ್ಯೆ)ಗೆ ಸಂಬಂಧಿಸಿದಂತೆ ಕಡಿತಗೊಳಿಸಿದ ಮತ್ತು ಠೇವಣಿ ಮಾಡಿದ ಎಲ್ಲಾ ತೆರಿಗೆಗಳ ಏಕೀಕೃತ ಸ್ಟೇಟ್ಮೆಂಟ್ ಆಗಿದೆ. ತೆರಿಗೆದಾರ ತನ್ನ ಒಟ್ಟು ವೇತನ, ಫಾರ್ಮ್ 16 ನಲ್ಲಿ ಉಲ್ಲೇಖಗೊಂಡಿರುವ ಟಿಡಿಎಸ್‌ಗಳು 26AS ಜೊತೆಗೆ ಹೊಂದಾಣಿಕೆಯಾಗಬೇಕು. ಮತ್ತೆ ಮುಂದಿನ ಹಂತಕ್ಕೆ ಹೋಗುವ ಮೊದಲು ಇದು ವಾರ್ಷಿಕ ಮಾಹಿತಿ ಸ್ಟೇಟ್ ಮೆಂಟ್ ಜೊತೆಗೂ ಹೊಂದಾಣಿಕೆಯಾಗಬೇಕಾಗುತ್ತದೆ.

### ತೆರಿಗೆ ಸಲ್ಲಿಸುವಿಕೆ ವೇಳೆ ಅರ್ಥಮಾಡಿಕೊಳ್ಳಬೇಕಿರುವ ಅಂಶಗಳು

ಹೊಸ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳುವವರು ರಿಟರ್ನ್ಸ್‌ನ್ನು ಜು.31, 2023ರ ವೇಳೆಗೆ ಸಲ್ಲಿಸಬೇಕಾಗುತ್ತದೆ. ವ್ಯಾಪಾರದ ಆದಾಯವು ಅನ್ವಯವಾಗುವ ಸ್ಲ್ಯಾಬ್ ದರಗಳಲ್ಲಿ ತೆರಿಗೆಗೆ ಒಳಪಡುತ್ತದೆ ಮತ್ತು ಅಲ್ಪಾವಧಿಯ ಬಂಡವಾಳ ಲಾಭಗಳು 15% ತೆರಿಗೆಗೆ ಒಳಪಡುತ್ತವೆ.ಫಾರ್ಮ್ 26AS, ತೆರಿಗೆ ಕಡಿತಗೊಂಡಿರುವ ಹಾಗೂ ಜಮಾ ಆಗಿರುವ ಏಕೀಕೃತ ಸ್ಟೇಟ್ ಮೆಂಟ್ ಆಗಿದೆ. ಸ್ಥಿರ ಠೇವಣಿಗಳಿಂದ ಬಡ್ಡಿ ಆದಾಯದ ಮೇಲೆ ಬ್ಯಾಂಕ್ TDS ಕಡಿತಗೊಳಿಸಿದಾಗ ಫಾರ್ಮ್ 16A ನೀಡಲಾಗುತ್ತದೆ.

### ತೆರಿಗೆ ಸಲ್ಲಿಸುವಿಕೆ ವೇಳೆ ಅರ್ಥಮಾಡಿಕೊಳ್ಳಬೇಕಿರುವ ಅಂಶಗಳು

ಹೊಸ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳುವವರು ರಿಟರ್ನ್ಸ್‌ನ್ನು ಜು.31, 2023ರ ವೇಳೆಗೆ ಸಲ್ಲಿಸಬೇಕಾಗುತ್ತದೆ. ವ್ಯಾಪಾರದ ಆದಾಯವು ಅನ್ವಯವಾಗುವ ಸ್ಲ್ಯಾಬ್ ದರಗಳಲ್ಲಿ ತೆರಿಗೆಗೆ ಒಳಪಡುತ್ತದೆ ಮತ್ತು ಅಲ್ಪಾವಧಿಯ ಬಂಡವಾಳ ಲಾಭಗಳು 15% ತೆರಿಗೆಗೆ ಒಳಪಡುತ್ತವೆ. ಫಾರ್ಮ್ 26AS, ತೆರಿಗೆ ಕಡಿತಗೊಂಡಿರುವ ಹಾಗೂ ಜಮಾ ಆಗಿರುವ ಏಕೀಕೃತ ಸ್ಟೇಟ್ ಮೆಂಟ್ ಆಗಿದೆ. ಸ್ಥಿರ ಠೇವಣಿಗಳಿಂದ ಬಡ್ಡಿ ಆದಾಯದ ಮೇಲೆ ಬ್ಯಾಂಕ್ TDS ಕಡಿತಗೊಳಿಸಿದಾಗ ಫಾರ್ಮ್ 16A ನೀಡಲಾಗುತ್ತದೆ.

# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ ಸುಧಾಕರ್ ಭಟ್, ಬ್ಯಾಂಕಿಂಗ್ ಸಲಹೆಗಾರರು.

**Compromise Settlement & Technical Write-off ಬಗ್ಗೆ ಇರುವ ಈ ಕೆಳಗಿನ ಅನುಮಾನಗಳಿಗೆ ಸಮಾಧಾನ ನೀಡಿ.**

01. **Compromise Settlement ಹಾಗೂ Technical Write-off ದಲ್ಲಿ Difference ಏನು ಇರುತ್ತದೆ. ಯಾವ ಯಾವ ಸಾಲಕ್ಕೆ Compromise Settlement ಮತ್ತು ಯಾವ ಯಾವ ಸಾಲಕ್ಕೆ Technical Write-off ಮಾಡಬಹುದು.**

02. **Compromise Settlement ಯಾವ ಸಾಲಗಾರರಿಗೆ ಹಾಗೂ ಯಾವ ಪರಿಸ್ಥಿತಿಯಲ್ಲಿ ಮಾಡಬಹುದು, ಅಂದರೆ ಆರ್ಥಿಕ ಪರಿಸ್ಥಿತಿ ಅಥವಾ ದಿವಾಳಿ ಅಥವಾ ಸಾಲ ಮರುಪಾವತಿಸಲು ಅಸಮರ್ಥ ಇತ್ಯಾದಿ.**
    **ಉದಾ : ರೂ.1,00,000/– ಸಾಲವಿದ್ದರೆ 75% ಅಸಲು ಮಾತ್ರ ಮರುಪಾವತಿಸಿದರೆ, ಉಳಿದ 25% ಸಾಲವನ್ನು ಹೇಗೆ ಖಾತೆಯಿಂದ ತೆಗೆಯಬೇಕು ಹಾಗೂ ಬಡ್ಡಿ ಹಣವನ್ನು P&L ದಿಂದ ತೆಗೆಯಬೇಕೆ? ಬಡ್ಡಿ ಹಣ ಜಮಾ–ಖರ್ಚು ಮಾಡಿದರೆ ಆದಾಯಕರ ಆಕರಣೆ ಆಗುತ್ತದೆ.**

03. **ನಮಗೆ ತಿಳಿದ ಹಾಗೆ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ Personal Loan ಗಳನ್ನು ಬಿಟ್ಟು ಉಳಿದ ಸಾಲಗಳು ಆಸ್ತಿ ಭದ್ರತೆಯ ಮೇಲೆ ಇರುತ್ತವೆ. ಇಂಥ ವಿಷಯದಲ್ಲಿ Compromise Settlement ಮಾಡಬಹುದೇ?**

04. **Technical procedureದಲ್ಲಿ ಸಾಲಗಳನ್ನು Write-off ಮಾಡಬೇಕಾದರೆ BDDR ಹಣದಿಂದ ಮಾಡಬೇಕೆ? BDDR ಮೊತ್ತ ಕಡಿಮೆ ಇದ್ದರೆ P&Lಕ್ಕೆ ಖರ್ಚು ಹಾಕಿ BDDR ಕ್ರಿಯೇಟ್ ಮಾಡಿಕೊಂಡು Write-off ಮಾಡಬೇಕೇ?**

05. **ಸಾಲಗಾರನು ಅಸಲಿನಲ್ಲಿ 50% ಹಣ ತುಂಬಲು ಸಿದ್ದರಿದ್ದ ವೇಳೆ ಉಳಿದ 50% BDDR ದಿಂದ ತೆಗೆಯಬೇಕೆ? ಹಾಗೂ ಬಡ್ಡಿಯನ್ನು P & L ತೆಗೆಯಬೇಕೆ?**

06. **In the write-off the bank does not retain the right to pursue the recovery, whereas in technical write-off the bank retains the right to recover the NPA ಈ ಕುರಿತು ವಿವರಿಸಿ.**

**– ಶ್ರೀ ಬಸವೇಶ್ವರ ಸಹಕಾರ ಬ್ಯಾಂಕ್ ಲಿ., ಬಾಗಲಕೋಟ.**

**ಉತ್ತರ** : (1) Compromise settlement ಹಾಗೂ Technical write off ಗಳಿಗೆ ಒಂದಕ್ಕೊಂದು ಸಂಬಂಧವಿಲ್ಲ. ಒಂದೇ ಸುಸ್ತಿ ಸಾಲದ ಖಾತೆಯಲ್ಲಿ Compromise settlement ಮತ್ತು Technical write off ಎರಡೂ ಇರಬಹುದು. ಉದಾಹರಣೆಗೆ : ಒಂದು ಕೋಟಿ ರೂಪಾಯಿ ಬಾಕಿ ಇರುವ ಒಂದು ಸಾಲ ಸುಸ್ತಿಯಾಗಿ ಮೂರು ವರ್ಷ ಕಳೆದಿದೆ. ಬ್ಯಾಂಕು ಈ ಸುಸ್ತಿ ಸಾಲಕ್ಕೆ ಮೂರು ಕೋಟಿ ರೂಪಾಯಿಗಳ ಅನುವು ಮಾಡಿದೆ. ಈ ವರ್ಷ ಜುಲೈ ತಿಂಗಳಲ್ಲಿ ಬ್ಯಾಂಕು ಒಟ್ಟು ಸುಸ್ತಿ ಸಾಲದ ಪ್ರಮಾಣ ಕಡಿಮೆಗೊಳಿಸಲು ಈ ಖಾತೆಯಲ್ಲಿ ಮಾಡಿದ ಮೂರು ಕೋಟಿ ರೂಪಾಯಿಗಳ ಅನುವನ್ನು ಉಪಯೋಗಿಸಿ ಕೇಂದ್ರ ಕಛೇರಿಯಲ್ಲಿ ಖಾತೆಯಲ್ಲಿ ಭಾಗಶಃ Technical Write off ಮಾಡುತ್ತದೆ. ಈ ವಿಷಯ ಸಾಲಗಾರನಿಗೆ ಸಂಬಂಧವಿಲ್ಲ ಮತ್ತು ಬ್ಯಾಂಕಿನ ಸಾಲ ವಸೂಲಾತಿ ಕ್ರಮ ಜಾರಿಯಲ್ಲಿರುತ್ತದೆ. ಈ ವರ್ಷ ಡಿಸೆಂಬರ್ ತಿಂಗಳಲ್ಲಿ ಬ್ಯಾಂಕು Compromise settlement ಕ್ರಿಯೆ ಜಾರಿಗೊಳಿಸುತ್ತದೆ. ಮೇಲೆ ತಿಳಿಸಿದ ಸಾಲದ ಖಾತೆ ಕೂಡಾ Compromise settlementನ ವ್ಯಾಪ್ತಿಯಲ್ಲಿ ಬಂದಲ್ಲಿ ಸಾಲಗಾರ ಬಾಕಿ ಇರುವ ಅಸಲು ರೂ. ಒಂದು ಕೋಟಿ ಮತ್ತು ಅನ್ವಯಿಸುವ ಬಡ್ಡಿಯನ್ನು ತುಂಬ ಬೇಕಾಗುತ್ತದೆ. ಮೇಲಿನ ಉದಾಹರಣೆಯಿಂದ ಎರಡು ವಿಷಯಗಳು ಸ್ಪಷ್ಟ ಅದೆಂದರೆ, ಭಾಗಶಃ ಅಥವಾ ಪೂರ್ಣ Technical Write off ಮಾಡಿದರೂ, ಸಾಲಗಾರ ತನ್ನ ಜವಾಬ್ದಾರಿಯಿಂದ ಮುಕ್ತನಾಗುವುದಿಲ್ಲ ಮತ್ತು ಎರಡನೇಯದಾಗಿ, Technical Write off ಮತ್ತು Compromise settlementಗಳಿಗೆ ಒಂದಕ್ಕೊಂದು ಸಂಬಂಧವಿಲ್ಲ ಮತ್ತು ಒಂದು ಸುಸ್ತಿ ಸಾಲದ ಖಾತೆಯಲ್ಲಿ ಎರಡೂ ಇರಬಹುದು.

**ಉತ್ತರ** : (2) ಸಾಲ ಮರುಪಾವತಿ ಮಾಡುವ ಉದ್ದೇಶವಿದ್ದರೂ ಮರುಪಾವತಿ ಮಾಡಲು ಸಾಕಷ್ಟು ಮಾರ್ಗಗಳಿಲ್ಲದೆ ಕಷ್ಟದಲ್ಲಿರುವ ಸಾಲಗಾರನಿಗೆ ನಿರ್ಗಮಿಸುವ ಅವಕಾಶ ಮಾಡಿ ಕೊಡುವುದು Compromise settlementನ ಪ್ರಮುಖ ಉದ್ದೇಶ. ಅನೇಕ ಪ್ರಯತ್ನಗಳ ಹೊರತಾಗಿಯೂ, ಬ್ಯಾಂಕು ಸುಸ್ತಿ ಸಾಲವನ್ನು ವಸೂಲಿ ಮಾಡಲು ಕಷ್ಟಪಡುತ್ತಿದ್ದರೆ, Compromise settlement ವಸೂಲಾತಿಗೆ ಬ್ಯಾಂಕಿಗೆ ಒಂದು ವರವಾಗಬಹುದು. ಇದಕ್ಕಾಗಿ ಸಾಲಗಾರ ದಿವಾಳಿಯಾಗುವ ಅಗತ್ಯವಿಲ್ಲ. ನೀವು ತಿಳಿಸಿದ ಉದಾಹರಣೆಯಲ್ಲಿ ರೂ.ಒಂದು ಲಕ್ಷ ಸಾಲದಲ್ಲಿ ರೂ.75,000 ಪಾವತಿಸಿದ್ದರೆ ಕೇವಲ ರೂ.25,000 ಸುಸ್ತಿಯಾಗಿರುತ್ತದೆ. ಈ ಸುಸ್ತಿ ಸಾಲ ಲಾಸ್ ಆಸ್ತಿಯಾಗಿದ್ದರೆ ರೂ.25,000 ಮತ್ತು ಡೌಟಫುಲ್ ಆಗಿದ್ದರೆ ಕನಿಷ್ಠ ರೂ.5,000 ಅನುವು ಮಾಡಬೇಕಾಗುತ್ತದೆ. ಈ ಖಾತೆಗೆ ಒ.ಟಿ.ಎಸ್. ನೀಡಿದರೆ ಸಾಲಗಾರ ಅಸಲು ರೂ.25,000 ಮತ್ತು ಸ್ವಲ್ಪ ಬಡ್ಡಿ ಪಾವತಿ ಮಾಡುತ್ತಾನೆ. ಆಗ ರೂ.25,000 ಸಾಲದ ಖಾತೆಗೆ ಮತ್ತು ಬಡ್ಡಿ ಹಣ ಬಡ್ಡಿ ಖಾತೆಗೆ ಜಮಾ ಆಗುತ್ತದೆ. ಅನುವು ಖಾತೆಯಲ್ಲಿರುವ ಮೊತ್ತವನ್ನು ಹಾಗೆ ಮುಂದುವರೆಸಬಹುದು ಅಥವಾ ಲಾಭ ನಷ್ಟದ ಖಾತೆಗೆ ವರ್ಗಾಯಿಸಬಹುದು. ಅನುವು ಖಾತೆಯಲ್ಲಿ ಜಮಾ ಆದ ಮೊತ್ತವನ್ನು ಲಾಭ ನಷ್ಟ ಖಾತೆಗೆ ವರ್ಗಾಯಿಸದಿದ್ದರೆ ಬ್ಯಾಂಕು ಕೇವಲ ಒ.ಟಿ.ಎಸ್ ನಿಂದ ದೊರಕಿದ ಬಡ್ಡಿಗೆ ಮಾತ್ರ ತೆರಿಗೆ ತೆರಬೇಕಾಗಿದೆ.

**ಉತ್ತರ** : (3) ಭದ್ರತೆ ಇರುವ ಸುಸ್ತಿ ಸಾಲಗಳಲ್ಲೂ Compromise settlement ಮಾಡಬಹುದು. ಆದರೆ, ವಸೂಲಾತಿಯ ಎಲ್ಲಾ ಕ್ರಮಗಳನ್ನು ಕೈಗೊಂಡ ನಂತರ ಒ.ಟಿ.ಎಸ್ ನೀಡುವುದು ಒಳಿತು.

**ಉತ್ತರ** : (4) ಒಂದು ಸುಸ್ತಿ ಸಾಲಕ್ಕೆ ಮಾಡಲಾದ ಅನುವನ್ನು (BDDR) ಉಪಯೋಗಿಸಿಕೊಂಡು Technical Write off ಮಾಡಬಹುದು. ಲಾಭ ನಷ್ಟ ಖಾತೆಗೆ ಖರ್ಚು ಹಾಕಿ ಅಗತ್ಯಕ್ಕಿಂತ ಜಾಸ್ತಿ ಅನುವು ಮಾಡಿದ್ದಲ್ಲಿ ಹೆಚ್ಚಿಗೆ ಇರುವ ಅನುವನ್ನು ಕೂಡಾ Technical Write off ಮಾಡಲು ಉಪಯೋಗಿಸಿಕೊಳ್ಳಬಹುದು.

**ಉತ್ತರ** : (5) ಸಾಲ ಸುಸ್ತಿಯಾದಾಗ ಬಡ್ಡಿಯನ್ನು ಆದಾಯವೆಂದು ಪರಿಗಣಿಸಲಾಗುವುದಿಲ್ಲ. ಆದ್ದರಿಂದ Compromise settlement ವೇಳೆ ಎಲ್ಲಾ ಬಡ್ಡಿ ಮನ್ನಾ ಮಾಡಿದರೂ ಲಾಭ ನಷ್ಟದ ಖಾತೆಯಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ; ಅಂದರೆ ಹೊಸತಾಗಿ ಖರ್ಚು ಹಾಕುವ ಪ್ರಮೇಯವಿಲ್ಲ. Compromise settlement ವೇಳೆ ಸಾಲಗಾರ ಬಾಕಿ ಇರುವ ಅಸಲಿನ 50% ಮಾತ್ರ ಕೊಟ್ಟಾಗ ಬಿ.ಡಿ.ಡಿ.ಆರ್ ದಿಂದ ತೆಗೆಯಬಹುದಾದ ಮೊತ್ತ ಬ್ಯಾಂಕು ಆ ಖಾತೆಗೆ ಮಾಡಿದ ಅನುವಿನ ಪ್ರಮಾಣವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ : ಕೇವಲ 20% ಅನುವು ಮಾಡಿದ್ದರೆ ಅಷ್ಟನ್ನು ಮಾತ್ರ ಬಿ.ಡಿ.ಡಿ.ಆರ್ ನಿಂದ ತೆಗೆಯಬಹುದು.

**ಉತ್ತರ** : (6) ಬ್ಯಾಂಕು ಸುಸ್ತಿ ಸಾಲವನ್ನು Write off ಮಾಡಿದಾಗ ಸಾಲ ಚುಕ್ತಾ ಆಗಿದೆ ಎಂಬ ಸರ್ಟಿಫಿಕೇಟ್‌ನ್ನು ಸಾಲಗಾರನಿಗೆ ನೀಡುತ್ತದೆ ಮತ್ತು ಸುಸ್ತಿ ಸಾಲದ ಮೇಲೆ ಬರಬೇಕಾದ ಬಡ್ಡಿಯನ್ನು ಕೂಡಾ ಬ್ಯಾಲೆನ್ಸ್‌ಶೀಟ್‌ನ ಎರಡೂ ಭಾಗದಿಂದ ವಜಾ ಮಾಡುತ್ತದೆ. Technical Write off ಮಾಡುವುದು ಕೇವಲ ಒಟ್ಟು ಸುಸ್ತಿ ಸಾಲದ ಪ್ರಮಾಣ ಕಡಿಮೆ ಮಾಡುವುದು ಮತ್ತು ತೆರಿಗೆ ವಿನಾಯಿತಿ ಪಡೆಯುವುದು. Technical write off ಮಾಡಿದ ನಂತರವೂ ವಸೂಲಾತಿ ಕ್ರಮ ಜಾರಿಯಲ್ಲಿರುತ್ತದೆ ಮತ್ತು ಆ ಖಾತೆಗೆ ಒ.ಟಿ.ಎಸ್. ಕೊಡುವ ಮೂಲಕವೂ ಸಾಲ ವಸೂಲಿ ಮಾಡಬಹುದು. ಕೇವಲ ವಸೂಲಾಗಲು ಸಾಧ್ಯವೇ ಇಲ್ಲದ ಸುಸ್ತಿ ಸಾಲಗಳಲ್ಲಿ ಮಾತ್ರ write off ಸಾಧ್ಯ. Technical Write off ಯಾವುದೇ ಸುಸ್ತಿ ಸಾಲದಲ್ಲಾದರೂ ಮಾಡಬಹುದು.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಮಧ್ಯಪ್ರದೇಶದ ಮೊರೆನಾ ಜಿಲ್ಲೆಯ ಶಿಕ್ಷಕ ಗಿರ್ವಾರ್ ಸಿಂಗ್ ತನ್ನ ಬಳಿ ಪಾಠ ಹೇಳಿಸಿಕೊಂಡು ಮೂರು ವರ್ಷದಿಂದ ಬಾಕಿ ಉಳಿಸಿಕೊಂಡಿದ್ದ ಫೀಸ್ ಕಟ್ಟುವಂತೆ ಹೇಳಿದ್ದಕ್ಕೆ, ವಿದ್ಯಾರ್ಥಿಗಳು ಶಿಕ್ಷಕನನ್ನು ಗುಂಡಿಕ್ಕಿ ಹತ್ಯೆ ಮಾಡಲು ಯತ್ನಿಸಿದ್ದಾರೆ. ಗಾಯಗೊಂಡಿರುವ ಶಿಕ್ಷಕ ಗಿರ್ವಾರ್ ಸಿಂಗ್ ಅವರನ್ನು ಪೊಲೀಸರು ಆಸ್ಪತ್ರೆಗೆ ಸೇರಿಸಿದ್ದಾರೆ.
- ಉತ್ತರಪ್ರದೇಶದ ನೊಯ್ಡಾದಲ್ಲಿ ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಯುವಕರಿಬ್ಬರು ಚಲಿಸುವ ಗೂಡ್ಸ್ ರೈಲಿನ ಮೇಲೆ ಯೋಗಾಭ್ಯಾಸ ಮಾಡಿ ಪೊಲೀಸರ ಅತಿಥಿಗಳಾಗಿರುವ ಘಟನೆ ನಡೆದಿದೆ.
- ಕೇರಳದ ಕೊಚ್ಚಿಯ ಅಮೃತ ಆಸ್ಪತ್ರೆ ದೇಶದಲ್ಲೇ ಮೊದಲ ಬಾರಿಗೆ ಹ್ಯಾಂಡ್ ಟ್ರಾನ್ಸ್‌ಪ್ಲಾಂಟ್ ಮಾಡಿದ್ದ ಖ್ಯಾತಿಗೆ ಒಳಗಾಗಿದೆ.
- ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಬಾವಿಕೆರೆ ನಿವಾಸಿ ರಾಘವೇಂದ್ರ ಭಟ್ ಎಂಬುವವರು ಸಾಕಿದ್ದ ಬೆಲ್ಜಿಯನ್ ಮಾಲಿನೋಯಿಸ್ ತಳಿಯ 17 ನಾಯಿ ಮರಿಗಳು ಸೇನೆಗೆ ಸೇರ್ಪಡೆಯಾಗಿದ್ದು, ಸೇನಾ ಅಧಿಕಾರಿಗಳು ನಾಯಿ ಮರಿಗಳನ್ನು ಅಸ್ಸಾಂಗೆ ಕರೆದೊಯ್ದಿದ್ದಾರೆ.
- ಕೊಡಗಿನ ಶನಿವಾರ ಸಂತೆಯಲ್ಲಿ ಯುವ ರೈತ ನಂದಕುಮಾರ್ ಅವರು ತಮ್ಮ ತಾರಸಿಯಲ್ಲಿ ವಿಶಿಷ್ಟವಾದ ಡ್ರ್ಯಾಗನ್ ಫ್ರೂಟ್ ಬೆಳೆದು ಇತರ ನಿವಾಸಿಗಳಿಗೂ ಈ ಬಗೆಯ ಹೆಚ್ಚು ಪೌಷ್ಟಿಕಾಂಶದ ಹಣ್ಣುಗಳನ್ನು ಬೆಳೆಯಲು ಪ್ರೇರೇಪಿಸುತ್ತಿದ್ದಾರೆ.
- ಭಾರತದ ಹಣಕಾಸು ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಅವಕಾಶಗಳನ್ನು ಕೈವಶ ಮಾಡಿಕೊಳ್ಳುವ ಪ್ರಯತ್ನದಲ್ಲಿರುವ ಆಪಲ್ ಕಂಪನಿ ಇಲ್ಲಿ ತನ್ನ ಆಪಲ್ಕಾರ್ಡ್ ಕ್ರೆಡಿಟ್ ಕಾರ್ಡ್ ಕಾರ್ಯಾಚರಣೆ ಪ್ರಾರಂಭಿಸಲು ಯೋಜಿಸುತ್ತಿದೆ. ಇದಕ್ಕಾಗಿ ನೀಡಲು ಎಚ್‌ಡಿಎಫ್‌ಸಿ ಬ್ಯಾಂಕಿನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಮುಂದಾಗಿದೆ.
- ಕರ್ನಾಟಕದ ವಾಣಿಜ್ಯ ಮತ್ತು ಕೈಗಾರಿಕೆಗಳು, ಮೂಲಸೌಕರ್ಯ ಸಚಿವ ಎಂ.ಬಿ.ಪಾಟೀಲ್, ಸಿರಿವಂತ ಉದ್ಯಮಿ ಎಲಾನ್ ಮಸ್ಕ್ ಅವರಿಗೆ ನಮ್ಮ ರಾಜ್ಯದಲ್ಲಿ ಉದ್ದಿಮೆ ಸ್ಥಾಪಿಸಲು ಆಹ್ವಾನ ನೀಡಿ, ಟೆಸ್ಲಾ ವಿಸ್ತರಣೆಗೆ ಕರ್ನಾಟಕವು ಪ್ರಶಸ್ತ ತಾಣವಾಗಿದೆ ಎಂದಿದ್ದಾರೆ.

## ಓದುಗರ ಅನಿಸಿಕೆ...




**ಸಾಲದ ಮರ್ಮವನ್ನು ಅರ್ಥವಾದವರು ತಿಳಿಸಬೇಕಿದೆ :** ಕೇಂದ್ರ ಸರ್ಕಾರಕ್ಕೆ 2022–23ನೇ ಹಣಕಾಸು ವರ್ಷದಲ್ಲಿ ಸಾರ್ವಜನಿಕ ವಲಯದ ಕಂಪನಿಗಳಿಂದ ರೂ.63,000 ಕೋಟಿ ಲಾಭಾಂಶ ಸಂದಿದೆ. ಅಲ್ಲದೇ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರೂ. 5,740 ಕೋಟಿ ಭರ್ಜರಿ ಲಾಭಾಂಶವನ್ನು ನೀಡಿದೆ. ಇಷ್ಟಲ್ಲದೇ ಇನ್ನೂ ಅನೇಕ ಸಾರ್ವಜನಿಕ ವಲಯದ ಬ್ಯಾಂಕುಗಳು ತಮ್ಮ ಪಾಲನ್ನು ನೀಡಲಿವೆ. ಅದರೂ ಕೇಂದ್ರ ಸರ್ಕಾರ ಕಳೆದ 9 ವರ್ಷಗಳಲ್ಲಿ ರೂ. 100 ಲಕ್ಷ ಕೋಟಿ ವಿದೇಶಿ ಸಾಲ ಮಾಡಿದೆ. ಈ ಸಾಲದ ಮರ್ಮವನ್ನು ಅರ್ಥವಾದವರು ತಿಳಿಸಿಬೇಕಿದೆ.

**▸▸ ಆರ್. ರವೀಂದ್ರ ಪಾಟೀಲ್, ಧಾರವಾಡ**

**ನಮಗೆಲ್ಲ ಅಪಾರ ಹೆಮ್ಮೆ :** ನಮ್ಮ ಜಿಲ್ಲೆಯ ಉಡುಪಿ ಕೋ–ಆಪರೇಟಿವ್ ಟೌನ್ ಬ್ಯಾಂಕಿಗೆ ಮುಂಬಯಿಯಲ್ಲಿ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಸಹಯೋಗದಲ್ಲಿ ನಡೆದ 7ನೇ ಅಖಿಲ ಭಾರತ ಪಟ್ಟಣ ಸಹಕಾರ ಬ್ಯಾಂಕುಗಳ ಸಮ್ಮಿತ್–2023ರಲ್ಲಿ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್ ರಾಷ್ಟ್ರೀಯ ಗೌರವ ಪ್ರಶಸ್ತಿ ಸಂದಿರುವುದು ಜಿಲ್ಲೆಯವರಾದ ನಮಗೆಲ್ಲ ಅಪಾರ ಹೆಮ್ಮೆಯನ್ನುಂಟು ಮಾಡಿದೆ.

**▸▸ ವಿ. ವೆಂಕಟರಮಣ ಭಟ್, ಕುಂದಾಪುರ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.